From,

**Dr. H.P. Halolli,**
Dept. of Kannada,
CSB Arts SMRP Science & GLR Commerce College,
Ramdurg – 591123

To,

**The Deputy Secretary and Regional Head,**
(Karnataka and Kerala State)
University Grants Commission (SWRO),
P.K. Block, Place Road,
Gandhi Nagar,
BANGALORE – 560009

(Forwarded through, The Director, College Development Council,
Rani Chennamma University, Belgavi)

**Subject : Submission of final Report along with 1st report and statement of expenditure in respect of MRP.**

**Ref : MRP(H)-239/08-09/KAKA022/UGC-SWRO dated 30th March 2009.**

Respected Sir,

With reference to the above I have the honour to submit herewith the 1st Report of work done and statement of expenditure of MRP (Minor Research Project) entitled **"GIGI TROUPE IN BELGAUM DISTRICT" [ A FLOKLORISTIC STUDY],** sanctioned to me with the above reference.

This is for your kind information and further needful action.

Thanking you,

Yours Sincerely,

**(Dr. H.P. Halolli)**

Date : 24.11.2014
Place : Ramdurg

Encl : As above

Submitted and forwarded through the Principal, CSB Arts, SMRP Science and GLR Commerce College, Ramdurg.

NO. CSB/UGC/MRP/HPH/14/15/584 D. 24/11/14

24/11/14

PRINCIPAL
C.S. Bembalagi Arts, Sha M.R.P. Science
& G. L. Rathi Commerce College, RAMDURG

**MINOR RESEARCH PROJECT**

## "GIGI TROUPE IN BELGAUM DISTRICT : A FLOKLORISTIC STUDY"

Dr.H.P.Halolli MA.Ph.D
Principal investigator
Department of Kannada
**C.S.Bembalagi Arts, Sha.M.R.Palaresha**
**Science & G.L.Rathi Commerce College, Ramdurg-591123**
**Dist: Belagavi Karnataka State**

## REPORT OF THE WORK DONE AND RESULTS ACHIEVED

## (01.06.2009 to 28.02.2011)

*Minor Research Project sanctioned by the* ***UGC Ref.no.MRP(H)-239/08-09/KAKA022/UGC-SWRO dated 30th March 2009*** *santioned to* ***Dr.H.P.Halolli, Department of Kannada*** *Vidya Prasarak Samiti's C.S.B.Arts, SMRP Science & G.L.Rathi Commerce College, Ramdurg. Dist:Belagavi Karnataka State.*

**ಪ್ರಸ್ತಾವನೆ:**

ಕರ್ನಾಟಕದ ಸಂಸ್ಕೃತಿಗೆ ಜನಪದ ಸಾಹಿತ್ಯ ಮತ್ತು ಜನಪದ ಕಲೆಗಳ ಕೊಡುಗೆ ಅಪಾರವಾದುದು. ಸಾವಿರಾರು ವರುಷಗಳಿಂದ ಜನಪದರು ಆಚರಿಸಿಕೊಂಡು ಬಂದ ಆಚಾರ, ವಿಚಾರಗಳು ಮತ್ತು ಸಾಹಿತ್ಯ, ಕಲೆಗಳು ಕರ್ನಾಟಕದಲ್ಲಿ ಒಂದೊಂದು ಪರಂಪರೆಯನ್ನೇ ನಿರ್ಮಿಸಿವೆ. ಈ ಹಿನ್ನೆಲೆಯಲ್ಲಿ ಜನಪದಗೀತ ಸಂಪ್ರದಾಯವು **'ಜನಾಂಗದ ಜೀವಾಳ'** ಎಂದು ಸಿಂಪಿ ಲಿಂಗಣ್ಣವರು ಹೇಳಿದ್ದು ಅಕ್ಷರಶಃ ನಿಜವಾದುದಾಗಿದೆ.

ಕನ್ನಡ ಜನಪದ ಗೀತ ಪರಂಪರೆಯ ಬಹುಮುಖ್ಯವಾದ ಕಲೆಯಾದ ಗೀಗೀ ಸಂಪ್ರದಾಯವು ಕನ್ನಡ ನಾಡು ನುಡಿಗೆ ಮತ್ತು ಸಂಸ್ಕೃತಿಗೆ ಅಪಾರವಾದ ಕಾಣಿಕೆಯನ್ನು ಸಲ್ಲಿಸುತ್ತ ಬಂದಿದೆ. ಈ ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಗೀಗೀ ಮೇಳಗಳ ಸಾಂಸ್ಕೃತಿಕ ಆಯಾಮಗಳನ್ನು ಅವುಗಳ ಪ್ರದರ್ಶನದ ಸಿದ್ಧಾಂತದ ಹಿನ್ನೆಲೆಯಲ್ಲಿ ಇಲ್ಲಿ ಅಧ್ಯಯನ ಮಾಡಲಾಗಿದೆ. ಇದಕ್ಕೆ ಪೂರಕವಾಗಿ ಗೀಗೀ ಮೇಳಗಳ ವರ್ತಮಾನದ ಪ್ರದರ್ಶನಗಳಿಗೆ

ಹೆಚ್ಚು ಒತ್ತು ನೀಡಲಾಗಿದೆ. ಇಲ್ಲಿಯ ವರೆಗೆ ಗೀಗೀ ಹಾಡುಗಾರಿಕೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಬೆಳಗಾವಿ ಜಿಲ್ಲೆಯ ಮುಖ್ಯವಾದ ಗೀಗೀ ಹಾಡುಗಾರರನ್ನು ಹಾಗೂ ಸ್ಥಳಗಳನ್ನು ಪರಿಚಯಿಸಲಾಗಿದೆ.

**ಅಧ್ಯಯನದ ರೂಪರೇಷೆ :**

ಪ್ರಸ್ತುತ ಸಂಪ್ರಬಂಧವು ಐದು ಪ್ರಮುಖ ಅಧ್ಯಾಯಗಳನ್ನು ಒಳಗೊಂಡಿದೆ. ಒಂದೊಂದು ಅಧ್ಯಾಯವು ಪ್ರತ್ಯೇಕ ಶೀರ್ಷಿಕೆಯಲ್ಲಿ ರಚಿತವಾಗಿವೆ. **ಮೊದಲಿಗೆ 'ಪ್ರವೇಶ'**ವಿದ್ದು ಅದರಲ್ಲಿ ಅಧ್ಯಯನದ ಉದ್ದೇಶ, ಗೀಗೀ ಸಾಹಿತ್ಯ ಮತ್ತು ಮೇಳಗಳ ಕುರಿತು ಇದು ವರೆಗೆ ನಡೆದಿರುವ ಸಂಶೋಧನೆಯ ಮಾಹಿತಿ ಇದೆ. ಪ್ರಸ್ತುತ ಅಧ್ಯಯನದ ಕುರಿತಾದ ಮಾಹಿತಿ ಸಂಗ್ರಹಣೆ, ಕ್ಷೇತ್ರ ಕಾರ್ಯದ ಕುರಿತಾದ ಮಾಹಿತಿಯನ್ನು ನೀಡಲಾಗಿದೆ. ಇದಲ್ಲದೆ ಪ್ರಸ್ತುತ ಸಂಶೋಧನೆಯ ಮಹತ್ವನ್ನು ಇಲ್ಲಿ ಹೇಳಲಾಗಿದೆ.

**ಅಧ್ಯಾಯ ಒಂದರಲ್ಲಿ ಗೀಗೀ ಅಥವಾ ಲಾವಣಿ ಪದದ ಮೂಲ, ಪ್ರಾಚೀನತೆ ಮತ್ತು ಗೀಗೀ ಪದದ ನಿಷ್ಪತ್ತಿ**ಯ ಕುರಿತಾದ ಚರ್ಚೆಯಿದೆ. ಗೀಗೀ ಅಥವಾ ಲಾವಣಿ ಪದದ ಮೂಲದ ಕುರಿತು ಹಾಗೂ ಪ್ರಾಚೀನತೆಯ ಕುರಿತು ಹಲವಾರು ವಿದ್ವಾಂಸರು ಮಂಡಿಸಿದ ಅಭಿಪ್ರಾಯಗಳನ್ನು ಆಧಾರವಾಗಿಟ್ಟುಕೊಂಡು ಗೀಗೀ ಅಥವಾ ಲಾವಣಿ ಪದದ ಮೂಲ ಹಾಗೂ ಪ್ರಾಚೀನತೆಯನ್ನು ಚರ್ಚಿಸಲಾಗಿದೆ. ಗೀಗೀ ಪದದ ನಿಷ್ಪತ್ತಿಯನ್ನು ಕುರಿತು ಚರ್ಚೆಯನ್ನು ಸಹ ಇಲ್ಲಿ ಕೈಗೊಳ್ಳಲಾಗಿದೆ.

**ಅಧ್ಯಾಯ ಎರಡರಲ್ಲಿ 'ಗೀಗೀ ಅಥವಾ ಲಾವಣಿ ಹಾಡುಗಳ ಲಕ್ಷಣ ಮತ್ತು ಸ್ವರೂಪ'** ದ ವಿಶ್ಲೇಷಣೆಯನ್ನು ಮಾಡಲಾಗಿದೆ. ಇಲ್ಲಿ ಗೀಗೀ ಹಾಡುಗಳ ಲಕ್ಷಣವನ್ನು ವಿವಿಧ ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಯಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ. ಗೇಯಗುಣಾತ್ಮಕ, ಛಂದೋಬದ್ಧ ರಚನೆಗಳಾದ ಗೀಗೀ ಹಾಡುಗಳು ಶಾಸ್ತ್ರ, ಶೃಂಗಾರ, ಪಾರಮಾರ್ಥ, ಹಾಸ್ಯ, ನೈತಿಕತೆ ಹಾಗೂ ವಿಡಂಬನೆಗಳಿಗೆ ಮೈಕೊಟ್ಟಿರುವುದನ್ನು ವಿಶ್ಲೇಷಿಸಲಾಗಿದೆ. ಗೀಗೀ ಹಾಡಿನ ಸ್ವರೂಪವನ್ನು ಗುರುತಿಸಲಾಗಿದೆ. ಸ್ತುತಿ, ಪಲ್ಲವಿ, ಚೌಕ, ಖ್ಯಾಲ ಮತ್ತು ಕೂಡುಪಲ್ಲ ಮೊದಲಾದ ಗೀಗೀ ಪದದ ಅಂಗಗಳ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದೆ. ಜೊತೆಗೆ ಗೀಗೀ ಪದಗಳ ವರ್ಗೀಕರಣವನ್ನು ಮಾಡಲಾಗಿದೆ.

**ಅಧ್ಯಾಯ ಮೂರರಲ್ಲಿ 'ಗೀಗೀ ಹಾಡುಗಳ ವಸ್ತು ಮತ್ತು ವೈವಿಧ್ಯತೆ'** ಯನ್ನು ಕುರಿತು ವಿಶ್ಲೇಷಿಸಲಾಗಿದೆ. ಗೀಗೀ ಹಾಡುಗಳ ವಸ್ತುವಿನ ಹರವು ತುಂಬಾ ವಿಶಾಲವಾದದು ಹೀಗಾಗಿ ಅದನ್ನು ಇಲ್ಲಿ ಸ್ತುತಿ ರೂಪದ ಪದಗಳು, ಕಥನ ರೂಪದ ಪದಗಳು, ನೀತಿ ಪದಗಳು ಮತ್ತು ತತ್ವ ಪದಗಳು ಎಂಬ ನೆಲೆಯಲ್ಲಿ ವಿಭಾಗಿಸಿ ಅಧ್ಯಯನ ಮಾಡಲಾಗಿದೆ. ಗೀಗೀ ಪದಗಳು ವೈವಿಧ್ಯಮಯವಾಗಿವೆ. ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಗೀಗೀ ಹಾಡುಗಾರರು ಗ್ರಾಮೀಣ ಜನಗಳಲ್ಲಿ ರಾಷ್ಟ್ರೀಯತೆ, ದೇಶಭಕ್ತಿ ಹಾಗೂ ಗಾಂಧೀ

ಚಳುವಳಿಗಳಿಗೆ ಮತ್ತು ಆಧುನಿಕ ಅಗತ್ಯಗಳಿಗೆ ಗೀಗೀ ಹಾಡುಗಳು ಮುಖವಾಣಿಯಾಗಿರುವುದನ್ನು ಇಲ್ಲಿ ವಿವರಿಸಲಾಗಿದೆ.

**ಅಧ್ಯಾಯ ನಾಲ್ಕರಲ್ಲಿ 'ಬೆಳಗಾವಿ ಜಿಲ್ಲೆಯ ಗೀಗೀ ಮೇಳಗಳು :** ಪ್ರಾಚೀನತೆ ಮತ್ತು ಪರಂಪರೆ'ಯ ವಿಶ್ಲೇಷಣೆಯನ್ನು ಮಾಡಲಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಬರುವ ತಾಲೂಕುಗಳಾದ ಅಥಣಿ, ರಾಯಭಾಗ, ಚಿಕ್ಕೋಡಿ, ಖಾನಾಪುರ, ಬೈಲಹೊಂಗಲ, ಸವದತ್ತಿ, ರಾಮದುರ್ಗ ತಾಲುಕುಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿರುವ ಗೀಗೀ ಮೇಳಗಳು, ಗೀಗೀ ಹಾಡುಗಾರರು ಮತ್ತು ಗೀಗೀಪದ ಕವಿಗಳ ಕುರಿತ ವಿವರಣೆ ಹಾಗೂ ಲಾವಣಿ ಅಥವಾ ಗೀಗೀ ಹಾಡುಗಾರಿಕೆಯ ಪ್ರಾಚೀನತೆಯನ್ನು ಕುರಿತ ಚರ್ಚೆಯನ್ನು ವಿವಿಧ ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಮಾಡಲಾಗಿದೆ. ಬೆಳಗಾವಿ ಜಿಲ್ಲೆಯ ಜನಪದಸಾಹಿತ್ಯ ಪರಂಪರೆಯ ಹಾಗೂ ಹಾಡುಗಾರಿಕೆ ಪರಂಪರೆಯ ವಿಶ್ಲೇಷಣೆಯ ಜೊತೆಗೆ ಗೀಗೀ ಮೇಳಗಳ ಪ್ರಕಾರಗಳನ್ನು ಗುರುತಿಸಲಾಗಿದೆ.

**ಅಧ್ಯಾಯ ಐದರಲ್ಲಿ 'ಬೆಳಗಾವಿ ಜಿಲ್ಲೆಯ ಗೀಗೀ ಮೇಳಗಳು :** ಸಾಂಸ್ಕೃತಿಕ ಮಹತ್ವ'ವನ್ನು ವಿಶ್ಲೇಷಿಸಲಾಗಿದೆ. ಬೆಳಗಾವಿ ಜಿಲ್ಲೆಯ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ಹಲವಾರು ಗ್ರಾಮಗಳಲ್ಲಿ ರಚಿತಗೊಂಡಿರುವ ಮೇಳಗಳ ಕಲಾವಿದರ ಸಾಮಾಜಿಕ ಹಿನ್ನೆಲೆ, ಗೀಗೀ ಮೇಳಗಳ ರಚನಾ ಸ್ವರೂಪ, ಗೀಗೀ ಮೇಳಗಳಲ್ಲಿ ಬಳಸುವ ವಾದ್ಯಪರಿಕರಗಳು, ಗೀಗೀ ಮೇಳಗಳ ಪ್ರದರ್ಶನದ ಸ್ವರೂಪ ಹಾಗೂ ಗೀಗೀ ಮೇಳಗಳ ಸಾಂಸ್ಕೃತಿಕ ಆಯಾಮಗಳ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದೆ. ಗೀಗೀ ಮೇಳಗಳು ಹಲವಾರು ಸಾಂಸ್ಕೃತಿಕ ಆಯಾಮಗಳನ್ನು ಹೊಂದಿ ಪ್ರಸಾರಣೆಯಲ್ಲಿ ಇವೆ. ಸಾಮಾಜಿಕ ಆಯಾಮ, ಧಾರ್ಮಿಕ ಆಯಾಮ ಮತ್ತು ಸಾಂಸ್ಕೃತಿಕ ಆಯಾಮಗಳ ನೆಲೆಯಲ್ಲಿ ಅವುಗಳನ್ನು ವಿವರಿಸಲಾಗಿದೆ.

**ಅಧ್ಯಾಯ ಆರರಲ್ಲಿ ಸಮಾರೋಪವಿದೆ.** ಇದರಲ್ಲಿ ಸಂಶೋಧನೆಯ ಫಲಿತಗಳನ್ನು ಎತ್ತಿ ಹೇಳಲಾಗಿದೆ. ಈ ಸಂಶೋಧನೆಯಿಂದ ಕಂಡುಕೊಂಡ ದರ್ಶನಗಳನ್ನು ಉಲ್ಲೇಖಿಸಲಾಗಿದೆ. ಸಂಶೋಧನೆಗೆ ಬಳಸಿಕೊಂಡ ಪರಾಮರ್ಶನ ಗ್ರಂಥಗಳ ಸೂಚಿಯನ್ನು ಕೊಡಲಾಗಿದೆ. ಬೆಳಗಾವಿ ಜಿಲ್ಲೆಯ ವಿವಿಧ ಗೀಗೀ ಮೇಳಗಳ ಕಾರ್ಯಕ್ರಮಗಳ ಪ್ರದರ್ಶನದ ಛಾಯಾ ಚಿತ್ರಗಳನ್ನು ಸಹ ಇಲ್ಲಿ ಒದಗಿಸಲಾಗಿದೆ. ಬೆಳಗಾವಿ ಜಿಲ್ಲೆಯ ಬಹುಪಾಲು ತಾಲೂಕು ಪ್ರದೇಶಗಳ ಗ್ರಾಮಗಳಲ್ಲಿ ರಚನೆಗೊಂಡಿರುವ ಹಾಗೂ ಈ ಹೊತ್ತಿಗೂ ಗೀಗೀ ಹಾಡುಗಾರಿಕೆಯ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಕಲಾವಿದರ ಹಾಗೂ ಮೇಳಗಳ ಸ್ಥಿತಿಗತಿಗಳ ಕುರಿತಾದ ಚರ್ಚೆಯಾಗಲಿ, ಅಧ್ಯಯನಗಳಾಗಲಿ ನಡೆಯದ ಇರುವ ದೃಷ್ಟಿಯಿಂದ ಬೆಳಗಾವಿ ಜಿಲ್ಲೆಯ ಗೀಗೀ ಪರಂಪರೆಯನ್ನು ಮಾತ್ರ ಲಕ್ಷ್ಯದಲ್ಲಿರಿಸಿಕೊಂಡು ಈ ಸಂಶೋಧನೆಯನ್ನು ಮಾಡಲಾಗಿದೆ.

## ಅಧ್ಯಯನದ ಫಲಿತಗಳು: (Summary of Finding)

ಅಧ್ಯಯನಕ್ಕೊಳಪಡಿಸಿದ ಎಲ್ಲ ಗೀಗೀ ಮೇಳಗಳು ಬೆಳಗಾವಿ ನೆಲದ ವೀರ ಪರಂಪರೆಯನ್ನು ಅವರ ತ್ಯಾಗ, ಔದಾರ್ಯ ಮತ್ತು ಸಾಹಸದ ಗುಣಗಳನ್ನು ಕರ್ನಾಟಕದ ಮೂಲೆ, ಮೂಲೆಗೂ ತಲುಪಿಸಿವೆ. ಆ ಮೂಲಕ ನಾಡ ಜನಗಳಲ್ಲಿ ನಾಡಿನ ರಕ್ಷಣೆಗಾಗಿ ಕಂಕಣ ಬದ್ಧರಾಗಬೇಕೆಂಬ ಸಂದೇಶವನ್ನು ಸಾರಿವೆ.

ಕಿತ್ತೂರು ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಬೆಳವಡಿ ಮಲ್ಲಮ್ಮ, ಹಲಗಲಿಯ ಬೇಡರು, ನರಗುಂದದ ಬಂಡಾಯ ರಾಮದುರ್ಗ ದುರಂತದಂತಹ ವೀರರ ಚರಿತ್ರೆ ಹಾಗೂ ವೀರಕಥನಗಳನ್ನು ಗೀಗೀಹಾಡುಗಾರರು ನಾಡ ತುಂಬೆಲ್ಲ ಪ್ರಸಾರಗೊಳಿಸಿದ್ದಾರೆ. ಕನ್ನಡಿಗರ ಕ್ಷಾತ್ರ ಗುಣವನ್ನು ಎತ್ತಿ ಹೇಳಿ ಅಂತಹ ಗುಣಗಳನ್ನು ಜನಗಳು ಬೆಳೆಸಿಕೊಳ್ಳುವಲ್ಲಿ ಪ್ರೇರಕರಾಗಿದ್ದಾರೆ.

ಭಾತರದ ರಾಷ್ಟ್ರೀಯ ಚಳುವಳಿಯ ಹಾಗೂ ಗಾಂಧೀಜಿಯವರ ಅಹಿಂಸಾತ್ಮಕ ಚಳುವಳಿಗಳ ಬಿಸಿಯನ್ನು ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಪ್ರತಿಯೊಂದು ಹಳ್ಳಿ ಹಳ್ಳಿಗಲ್ಲಿ ಕಾಣುತ್ತೇವೆ. ಭಾರತದ ಬಂಧ ವಿಮೋಚನೆಗಾಗಿ ಗ್ರಾಮೀಣ ಜನಗಳನ್ನು ಹೋರಾಟದಲ್ಲಿ ಧುಮುಕುವಂತೆ ಮಾಡಿದ್ದು ಗೀಗೀ ರಚನಾಕಾರರು ಸ್ವತಃ ಮೇಳಗಳನ್ನು ಕಟ್ಟಿಕೊಂಡು ಹಾಡುವ ಮೂಲಕ ಭಾರತದ ಸ್ವಾತಂತ್ರ್ಯ ಚಳುವಳಿಗೆ ಶಕ್ತಿ ಹಾಗೂ ಸಂಚಲವನ್ನು ಉಂಟು ಮಾಡಿದ್ದನ್ನು ಕಾಣಬಹುದು.

ಗೀಗೀ ಸಂಪ್ರದಾಯವು ಕನ್ನಡದ ಜನಗಳಲ್ಲಿ ನೈತಿಕ ಮೌಲ್ಯ, ಆದರ್ಶ ಹಾಗೂ ಸದ್ಗುಣಗಳನ್ನು ಬೆಳೆಸುವಲ್ಲಿ ಮುಖ್ಯವಾದ ಪಾತ್ರವಹಿಸಿದೆ. ಹೆಣ್ಣು ಮಕ್ಕಳು ನೀತಿ ನಿಯಮದಿಂದ ಹೇಗೆ ನಡೆದುಕೊಳ್ಳುಬೇಕು ಮತ್ತು ಪತಿವ್ರತಾ ಧರ್ಮವನ್ನು ಹೇಗೆ ಪಾಲಿಸಬೇಕೆಂಬುದನ್ನು ಮಹಾಕಾವ್ಯ ಮತ್ತು ಪುರಾಣಗಳ ಮಾದರಿ ಸತಿಯರಾದ ಸೀತೆ, ಸಾವಿತ್ರಿ, ಅಹಲ್ಯೆ, ಅನುಸುಯಾ, ಮುಂತಾದವರ ಸತಿಧರ್ಮವನ್ನು ಹಾಡಿ ಹೆಣ್ಣು ಮಕ್ಕಳಿಗೆ ಪತಿವ್ರತಾಧರ್ಮವನ್ನು ಬೋಧಿಸಿದ್ದಾರೆ.

ಕನ್ನಡದ ಜನಗಳು ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದವರು. ಪರಧರ್ಮ ಸಹಿಷ್ಣುಗಳು ಎಂಬ ವಿಚಾರವನ್ನು ಗೀಗೀ ಹಾಡುಗಾರರು ಸಾರಿ ಹೇಳಿದ್ದಾರೆ. ಸಮಾಜದ ಎಲ್ಲ ಜಾತಿ, ಮತ, ಧರ್ಮಗಳ ಜನರು ಸಹಕಾರದಿಂದ ಕೂಡಿ ಬಾಳಿದರೆ ಸ್ವರ್ಗ ಸುಖ ಸಿಗುತ್ತದೆ ಎಂಬ ತತ್ವವನ್ನು ಸಾರಿ ಹೇಳಿದ್ದಾರೆ.

ಮಧ್ಯಪಾನ, ಧೂಮಪಾನ, ಜೂಜು ಮುಂತಾದ ದುಶ್ಚಟಗಳಿಂದ ಯುವಕರು ದೂರಾಗಿ ಶಾಂತಿ, ಸಹನೆ, ಸಹಕಾರ, ಮನೋಭಾವದಿಂದ ಜೀವನ ಸಾಗಿಸುವ ಆದರ್ಶ ತತ್ವಗಳನ್ನು ಯುವಕರಲ್ಲಿ ಬಿಂಬಿಸಿದ್ದಾರೆ.

ಸಾಮಾಜಿಕ ಪಿಡುಗುಗಳಾದ ಅಸ್ಪೃಶ್ಯತೆಯ ಆಚರಣೆ, ವರದಕ್ಷಿಣೆ, ಬಾಲ್ಯವಿವಾಹ ಮುಂತಾದ ಅನಿಷ್ಟ ಪದ್ಧತಿಗಳ ಆಚರಣೆಯ ನಿರಾಕರಣೆಯ ಕುರಿತು ಜನಗಳಲ್ಲಿ ಅರಿವು ಮೂಡಿಸಿದ್ದಾರೆ.

ಲಿಂಗ ಸಮಾನತೆ, ಜಾತಿ ಸಮಾನತೆ ಮತ್ತು ವರ್ಗ ಸಮಾನತೆಯ ತತ್ವಗಳನ್ನು ಹಾಡುಗಾರಿಕೆಯಿಂದ ಪ್ರಚುರ ಪಡಿಸಿದವರು ಗೀಗೀ ಹಾಡುಗಾರರು. ಹೆಣ್ಣು-ಗಂಡಿನ ಹೆಚ್ಚುಗಾರಿಕೆಯ ಹಾಡುಗಳನ್ನು ಹಾಡುವ ಮೂಲಕ ಸಮಾಜದಲ್ಲಿದ್ದ ಲಿಂಗಬೇಧವನ್ನು ತೊಡೆದು ಹಾಕಿ, ಸೃಷ್ಟಿಯಲ್ಲಿ ಯಾವುದು ಮೇಲೂ ಅಲ್ಲ ಕೀಳೂ ಅಲ್ಲ ಎಂಬ ಸತ್ಯವನ್ನು ಬಿತ್ತರಿಸಿದ್ದಾರೆ.

ಪ್ರತಿಯೊಂದು ಗೀಗೀಮೇಳಗಳಲ್ಲಿ ಹುಡುಗರಿಗಿಂತ ಅನುಭವಿ ಹಾಡುಗಾರರಿಗೆ ಪ್ರಾಧಾನ್ಯತೆ ಇರುತ್ತದೆ. ಇಲ್ಲಿನ ಕಲಾವಿದರೆಲ್ಲ ಮಧ್ಯವಯಸ್ಸರಾಗಿರುತ್ತಾರೆ ಹಾಗೂ ಬಹುಪಾಲು ಕಲಾವಿದರು ಕೃಷಿ ಪರಂಪರೆಯಿಂದ ಬಂದವರಾಗಿರುತ್ತಾರೆ.

ಗೀಗೀ ಹಾಡುಗಾರಿಕೆಯ ಪ್ರದರ್ಶನಗಳೆಲ್ಲ ಬಯಲು ಪ್ರದರ್ಶನಗಳೇ ಆಗಿವೆ. ಇಲ್ಲಿ ಸುಸಜ್ಜಿತವಾದ ರಂಗ ಸಜ್ಜಿಕೆಯ ಪರಿಕಲ್ಪನೆ ಇರುವುದಿಲ್ಲ. ಇವು ಆಡಂಬರ ರಹಿತ ಸಹಜ ಪ್ರದರ್ಶನಗಳಾಗಿರುತ್ತವೆ.

ಪ್ರತಿ ಮೇಳದವರು ಅವರವರ ಸಂಪ್ರದಾಯಕ್ಕೆ (ಹರದೇಶಿ-ನಾಗೇಶಿ) ಅನುಸಾರವಾಗಿ ಸೃಷ್ಟಿ, ಉತ್ಪತ್ತಿ, ಅನುಭಾವ ತತ್ವ, ನೀತಿ, ಚರಿತ್ರೆ ಮತ್ತು ಮನರಂಜನೆ ವಸ್ತುಗಳನ್ನುಳ್ಳ ಹಾಡುಗಳನ್ನು ಹಾಡುತ್ತಾರೆ.

ಗೀಗೀ ಹಾಡುಗಾರಿಕೆಯ ಪ್ರತಿಯೊಂದು ಹಾಡುಗಳು ಮೇಳಗಳ ನಾಯಕ ಅಥವಾ ನಾಯಕಿಯರಿಂದಲೇ ಹಾಡಲು ಪ್ರಾರಂಭವಾಗುತ್ತವೆ. ಎಲ್ಲಾ ಮೇಳಗಳಲ್ಲಿ ಮುಮ್ಮೇಳ ಮತ್ತು ಹಿಮ್ಮೇಳ ಇದ್ದೇ ಇರುತ್ತದೆ. ಪ್ರತಿ ಮೇಳಗಳಲ್ಲಿ ಕಲಾವಿದರ ಸಂಖ್ಯೆ ಒಂದೇ ಆಗಿರುತ್ತದೆ.

ಗೀಗೀ ಹಾಡುಗಾರಿಕೆಯ ವೃತ್ತಿ ಗಾಯಕ ಪರಂಪರೆಯಾಗಿ ಬೆಳೆದು ಬಂದಿಲ್ಲ. ಇದು ಹವ್ಯಾಸಿ ಗಾಯಕ ಪರಂಪರೆಯಾಗಿ ಬೆಳೆದು ಬಂದಿರುವಂಥದ್ದು, ಪ್ರದರ್ಶನಗಳು ಇಲ್ಲದ ದಿನಮಾನಗಳಲ್ಲಿ ಈ ಕಲಾವಿದರು ತಮ್ಮ ಉಪಜೀವನಕ್ಕಾಗಿ ಕೃಷಿ, ವ್ಯಾಪಾರ, ಕೈಗಾರಿಕೆ ಮತ್ತು ಇನ್ನಿತರ ಕೆಲಸಗಳನ್ನು ಮಾಡುತ್ತ ಬಂದವರಾಗಿದ್ದಾರೆ.

ಇತ್ತೀಚಿನ ದಿನಮಾನಗಳಲ್ಲಿ ಗೀಗೀ ಹಾಡುಗಾರಿಕೆಯಲ್ಲಿ ಹೆಚ್ಚು ಮಹಿಳೆಯರ ಪ್ರವೇಶವಾಗುತ್ತಿರುವುದು ಗೀಗೀಮೇಳಗಳ ಜನಪ್ರಿಯತೆಗೆ ಕಾರಣವಾಗಿದೆ. ಅದರಲ್ಲೂ ದಲಿತ ಮಹಿಳೆಯರು ಹೆಚ್ಚು ಪ್ರವೇಶಿಸುತ್ತಿರುವುದನ್ನು ಕಾಣುತ್ತೇವೆ. ಇಲ್ಲಿ ಮಹಿಳೆಯರು ಇದನ್ನೊಂದು ವೃತ್ತಿ ಕಲೆಯಾಗಿಸಿಕೊಂಡಿರುವಂತೆ ತೋರುತ್ತದೆ.

ನಾಗೇಶಿ ಪಂಥದ ಮೇಳಗಳಲ್ಲಿ ಮುಖ್ಯ ಹಾಡುಗಾರಳಾಗಿ ಮಹಿಳೆಯರೇ ಇರುವುದನ್ನು ಕಾಣುತ್ತೇವೆ. ಇಂತಹ ಮಹಿಳಾ ಮೇಳಗಳಲ್ಲಿ ಹಿಮ್ಮೇಳ ಕಲಾವಿದರಾಗಿ ಪುರುಷರು ಮತ್ತು ಮಹಿಳೆಯರು ಇಬ್ಬರೂ ಇರುವುದನ್ನು ಕಾಣುತ್ತೇವೆ.

ಹರದೇಶಿ ಪಂಥದ ಮೇಳಗಳಲ್ಲಿ ಮುಖ್ಯ ಹಾಡುಗಾರರಾಗಿ ಪುರುಷರೇ ಇರುವುದನ್ನು ಕಾಣುತ್ತೇವೆ. ಹಿಮ್ಮೇಳಗಳಲ್ಲಿಯೂ ಸಹ ಪುರುಷ ಕಲಾವಿದರೇ ಇರುವುದನ್ನು ಕಾಣುತ್ತೇವೆ.

ಗೀಗೀ ಮೇಳಗಳಲ್ಲಿ ಧಾರ್ಮಿಕ ಸೌಹಾರ್ದತೆಯನ್ನು ಕಾಣುತ್ತೇವೆ. ಅನೇಕ ಮೇಳಗಳಲ್ಲಿ ಮುಸ್ಲಿಂ ಹಾಡುಗಾರರು ಇರುವುದನ್ನು ಕಾಣುತ್ತೇವೆ. ಮುಸ್ಲಿಂ ಹಾಡುಗಾರರೇ ಮುಖ್ಯಹಾಡುಗಾರರಾಗಿರುವ ಮೇಳಗಳು ಸಹ ಇಲ್ಲಿವೆ. ಸ್ವತಃ ಮುಸ್ಲಿಂ ಕಲಾವಿದರೇ ಕವಿಗಳಾಗಿ ಗೀಗೀ ಹಾಡುಗಳನ್ನು ರಚಿಸಿರುವುದನ್ನು ಕಾಣಬಹುದು.

ಗೀಗೀ ಸಂಪ್ರದಾಯದಲ್ಲಿ ಬರುವ ಮುಸ್ಲಿಂ ಕಲಾವಿದರು ಧರ್ಮಾಂಧರಾಗಿರದೆ ಹಿಂದೂ ಧರ್ಮದ ಮಹಾಕಾವ್ಯ, ಶಾಸ್ತ್ರ, ಪುರಾಣಗಳನ್ನು ತಿಳಿದುಕೊಂಡವರಾಗಿದ್ದಾರೆ. ಅವರು ಸಾಧು, ಸಂತರ, ಶರಣರ–ದಾಸರ ತತ್ವಜ್ಞಾನ, ಅನುಭಾವವನ್ನು ಅರಿತುಕೊಂಡ ಪಾರಮಾರ್ಥಿಕ ಅಭಿರುಚಿವುಳ್ಳವರಾಗಿದ್ದಾರೆ.

ಗೀಗೀ ಹಾಡುಗಾರಿಕೆಯ ಒಂದು ನಿರ್ದಿಷ್ಟ ಕೋಮಿಗೆ, ಜಾತಿಗೆ, ವರ್ಗಕ್ಕೆ ಅಥವಾ ಧಾರ್ಮಿಕ ಆಚರಣೆಗೆ ಬದ್ಧವಾಗಿರುವುದಿಲ್ಲ. ಅದೊಂದು ಮುಕ್ತ ಕಲೆಯಾಗಿ ಬೆಳೆದು ಬಂದಿದೆ. ಇದೇ ಗೀಗೀ ಮೇಳಗಳ ಜೀವಂತಿಕೆಗೆ ಕಾರಣವಾಗಿದೆ.

ಪ್ರತಿಯೊಂದು ಮೇಳಗಳಲ್ಲಿ ಕಲಾವಿದರು ಕೆಳವರ್ಗದಿಂದ ಬಂದವರೇ ಹೆಚ್ಚಾಗಿರುವುದನ್ನು ಕಾಣುತ್ತೇವೆ. ಮತ್ತು ಬೇರೆ ಬೇರೆ ಸಾಮಾಜಿಕ ವಲಯಗಳಿಂದಲೂ ಬಂದವರಾಗಿರುತ್ತಾರೆ.

ನಾಗೇಶಿ ಪಂಥದ ಮುಖ್ಯ ಹಾಡುಗಾರ್ತಿಯಾದ ಹೆಣ್ಣು ಮಗಳು, ಪುರುಷನ ಸಮಾನ ಸ್ಥಾನದಲ್ಲಿ ನಿಂತು ಸಮರ್ಥವಾಗಿ ಮೈಚಳಿ ಬಿಟ್ಟು, ದಪ್ಪು ಬಾರಿಸುತ್ತ, ಹಾಡುವ ರೀತಿ ನೋಡುಗರಲ್ಲಿ ರೋಮಾಂಚನವನ್ನುಂಟು ಮಾಡುತ್ತದೆ.

ಗೀಗೀಮೇಳಗಳ ಹಾಡುಗಾರಿಕೆಯಲ್ಲಿ ಚಾರಿತ್ರಿಕ ಹಾಡುಗಳು, ವೀರರ ಹಾಡುಗಳು, ತತ್ವಪದ ಹಾಡುಗಳು, ನೈತಿಕ ತತ್ವದ ಹಾಡುಗಳು ಮತ್ತು ಮನರಂಜನೆಯ ಹಾಡುಗಳು ಹಾಡಲ್ಪಟ್ಟರು ಸಹ, ಜನಗಳನ್ನು ಹೆಚ್ಚು ಆಕರ್ಷಿಸಿರುವ ಹಾಡುಗಳೆಂದರೆ ಹರದೇಶಿ–ನಾಗೇಶಿ ಹಾಡುಗಳು, ಸವಾಲ್–ಜವಾಬ್ ಹಾಡುಗಳಾಗಿವೆ. ಇದಕ್ಕೆ ಕಾರಣ ಕೇಳುಗರ ಅಭಿರುಚಿ ಮತ್ತು ಆಕಾಂಕ್ಷೆಗಳು ಎನ್ನಬಹುದು.

ಇಲ್ಲಿನ ಹಾಡುಗಳಲ್ಲಿ ಪೂರ್ವ ತಯಾರಿ ಸಾಕಷ್ಟಿದ್ದರೂ ಸಹ ಸಂದರ್ಭಕ್ಕೆ ತಕ್ಕ ಹಾಗೆ ಹಾಡಿನಲ್ಲಿ ಆಶು ಕವಿತ್ವದ ಅನೇಕ ಅಂಶಗಳನ್ನು ಕಾಣುತ್ತೇವೆ. ಇದು ಕಲಾವಿದರ ಪ್ರತಿಭಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಪ್ರಶ್ನೆ ಮತ್ತು ಉತ್ತರ ರೂಪದಲ್ಲಿ ಸಾಗುವ ಮತ್ತು ಅದನ್ನು ನಿದರ್ಶನಗಳ ರೂಪದಲ್ಲಿ ಸ್ಪಷ್ಟಪಡಿಸುವ ರೀತಿ ನಿಜವಾಗಿಯೂ ಪ್ರೇಕ್ಷಕರನ್ನು ದಂಗಾಗಿಸುವಂತಿರುತ್ತದೆ.

ಗೀಗೀ ಹಾಡುಗಾರಿಕೆಯು ಹೆಚ್ಚು ಪ್ರದರ್ಶಿತಗೊಳ್ಳುವುದು ಜಾತ್ರೆ–ಉತ್ಸವ, ಹಬ್ಬಹರಿದಿನಗಳಲ್ಲಿಯಾದರೂ ಇತ್ತೀಚಿನ ದಿನಮಾನಗಳಲ್ಲಿ ಅದೊಂದು ಅರಿವು ಮೂಡಿಸುವ ಜಾಗೃತಿಗೊಳಿಸುವ ಮಾಧ್ಯಮವಾಗಿಯೂ ಸಹ ಬಳಕೆಗೊಳ್ಳುತ್ತಿದೆ. ಸರ್ಕಾರದ ಅನೇಕ ಇಲಾಖೆಗಳು ತಮ್ಮ ಕಾರ್ಯಕ್ರಮಗಳನ್ನು ಜನಗಳಿಗೆ ತಲುಪಿಸುವುದಕ್ಕಾಗಿ ಗೀಗೀ ಹಾಡುಗಾರಿಕೆಯನ್ನು ಬಳಸಿಕೊಳ್ಳುತ್ತಿರುವುದನ್ನು ಕಾಣುತ್ತೇವೆ. ವಾರ್ತಾ ಮತ್ತು ಪ್ರಚಾರ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಸಮಾಜ ಪರಿವರ್ತನಾ ಸಂಘ ಸಂಸ್ಥೆಗಳು ಮುಂತಾದವುಗಳು.

ಗೀಗೀಮೇಳಗಳು ತಮ್ಮ ಹಾಡುಗಾರಿಕೆಯ ಮೂಲಕ ಜನಗಳಲ್ಲಿ ಮನುಷ್ಯತ್ವವನ್ನು, ಸಮಾಜದಲ್ಲಿ ಪರಿವರ್ತನೆಯನ್ನು ಮತ್ತು ನಾಡಿನಲ್ಲಿ ಸಂಸ್ಕೃತಿಯ ಸಮೃದ್ಧಿಯನ್ನು ತರಲು ಹಂಬಲಿಸುವಂಥವುಗಳಾಗಿವೆ.

## ಸಲಹೆಗಳು (SUGGESTIONS):

ಭಾರತದ ಸ್ವಾತಂತ್ರ್ಯ ಚಳುವಳಿಯ ಕಾಲದಿಂದಲೂ ಪ್ರಸಾರಣೆಯಲ್ಲಿದ್ದ ಗೀಗೀ ಮೇಳಗಳು ಇಂದು ಕಣ್ಣರೆಯಾಗುತ್ತಿವೆ. ಹಿಂದಿನ ಕಾಲದ ಎಷ್ಟೋ ಮೇಳಗಳು ಹಾಗೂ ಹಾಡುಗಾರರು ಇಂದು ಕಣ್ಣರೆಯಾಗಿದ್ದಾರೆ. ಸ್ವತಃ ಲಾವಣಿ ರಚಿಸಿದ ಕವಿಗಳೇ ಒಂದೊಂದು ಮೇಳಗಳನ್ನು ಕಟ್ಟಿ ಗೀಗೀ ಹಾಡುಗಳನ್ನು ಪ್ರಸಾರಗೊಳಿಸಿದ್ದನ್ನು ಕಾಣುತ್ತೇವೆ. ಆದರೆ ಇಂದಿನ ಆಧುನಿಕ, ವೈಜ್ಞಾನಿಕ ಜಗತ್ತಿನ ಟಿ.ವ್ಹಿ., ಸಿನೇಮಾ ಮಾಧ್ಯಮಗಳ ಭರಾಟೆಯ ಈ ಕಾಲದಲ್ಲಿ ಅಳಿದುಳಿದ ಹಾಡುಗಾರರು ಮತ್ತು ಮೇಳಗಳು ಕಳೆದು ಹೋಗುತ್ತಿರುವುದನ್ನು ಸಹ ಕಾಣುತ್ತಿದ್ದೇವೆ. ಇದಕ್ಕೆ ಸರ್ಕಾರ, ಸಂಘ ಸಂಸ್ಥೆಗಳ ನಿರ್ಲಕ್ಷ್ಯ ಧೋರಣೆಯೂ ಕೂಡ ಕಾರಣವಾಗಿದೆ ಎನ್ನಬಹುದು. ನಮ್ಮ ಸಂಸ್ಕೃತಿಯ ಉಳುವಿಗೆ ಕಾರಣರಾದ ಗೀಗೀಹಾಡುಗಾರರಿಗೆ ಪ್ರೋತ್ಸಾಹ, ಸಹಾಯ ಸಹಕಾರಗಳಿಲ್ಲದ ಕಾರಣ ಮತ್ತು ಅವರಿಗೆ ಹೊಟ್ಟೆ ಬಟ್ಟೆಯನ್ನು ತುಂಬಿಕೊಳ್ಳುವಷ್ಟು ಸಹ ಮಾಶಾಸನ ನೀಡದಿರುವುದು ಗೀಗೀಹಾಡುಗಾರರು ಹಾಗೂ ಮೇಳಗಳು ಮರೆಯಾಗುವುದಕ್ಕೆ ಪ್ರಮುಖ ಕಾರಣವಾಗಿದೆ. ಎಷ್ಟೋ ಜನ ಜನಪದ ಕಲಾವಿದರು ತಮ್ಮ ಕಲೆಯನ್ನು ನಂಬಿ ಜೀವನ ಸಾಗಿಸುವುದಕ್ಕೆ ಆಗದೆ ಬೀದಿಪಾಲಾಗಿರುವುದು ಕಂಡುಬರುತ್ತದೆ. ಮತ್ತು ಅವರು ತಮ್ಮ ಮಕ್ಕಳಿಗೆ ಯೋಗ್ಯ ಶಿಕ್ಷಣ ಕೊಡಿಸುವುದಕ್ಕಾಗದೆ ಅವರ ಮಕ್ಕಳು ಕೂಲಿನಾಲಿ ಮಾಡಿ ಬದುಕ ಬೇಕಾದ ಸ್ಥಿತಿ ಇದೆ. ಹೀಗಾಗಿ ಹಳೆಯ ಜನಪದ ಕಲಾವಿದರು ನಶಿಸಿದಂತೆಲ್ಲ ಅಲ್ಲಿ ಹೊಸಬರು ಮತ್ತು ಯುವಕರು ಪ್ರವೇಶಿಸುವುದಕ್ಕೆ, ಜನಪದಕಲೆಗಳನ್ನು ಉಳಿಸಿ, ಬೆಳೆಸುವುದಕ್ಕೆ ಮುಂದೆ ಬರುತ್ತಿಲ್ಲ. ಕಾರಣ ಸರ್ಕಾರ ಹಾಗೂ ಸಂಘ ಸಂಸ್ಥೆಗಳು ಇನ್ನು ಮುಂದೆಯಾದರೂ ಇಂತಹ ಜನಪದ ಕಲಾವಿದರಿಗೆ, ಜನಪದಕಲೆಗಳಿಗೆ ಪ್ರೋತ್ಸಾಹ ನೀಡಿ ಅವರಿಗೆ ಯೋಗ್ಯ ಮಾಶಾಸನ, ಗೌರವ, ಸನ್ಮಾನ, ಅವರ ಮಕ್ಕಳಿಗೆ ಯೋಗ್ಯ ಶಿಕ್ಷಣ ನೀಡಿ ಬೆಳೆಸಿದ್ದೇ ಆದಲ್ಲಿ ಅಲ್ಪ

ಸ್ವಲ್ಪ ಮಟ್ಟಿಗಾದರೂ ಈ ಕಲೆಯನ್ನು ಮುಂದಿನ ಪೀಳಿಗೆಗೆ ಪರಿಚಯಸುವುದಕ್ಕೆ ಮತ್ತು ಜೀವಂತವಾಗಿಡುವುದಕ್ಕೆ ಸಾಧ್ಯವಾಗುತ್ತದೆ.

ನಮ್ಮ ಸರ್ಕಾರಗಳು, ಸರ್ಕಾರಿ ಸಂಘ ಸಂಸ್ಥೆಗಳು ಹಾಗೂ ಖಾಸಗಿ ವಲಯದ ಸಂಸ್ಥೆಗಳು ಇಂತಹ ಕಲೆಗಳನ್ನು ಜನಪದ ಕಲಾವಿದರನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಜಾನಪದಜಾತ್ರೆ, ಜಾನಪದಉತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಳ್ಳಿ ಹಾಗೂ ಪಟ್ಟಣಗಳಲ್ಲಿ ಹಮ್ಮಿಕೊಳ್ಳುವ ಮೂಲಕ ಪ್ರೋತ್ಸಾಹಿಸುವ ಅಗತ್ಯತೆ ಇಂದು ಇದೆ ಎನ್ನಬಹುದು. ನಮ್ಮ ಸಂಸ್ಕೃತಿಯ ಬೇರುಗಳಾದ ಜನಪದಸಾಹಿತ್ಯ, ಕಲೆ ಮತ್ತು ಕಲಾವಿದರ ಮೂಲಕ ನಾವು ಇಂದು ಜಾಗತೀಕರಣದ ಸವಾಲುಗಳನ್ನು ಸಹ ಎದುರಿಸಬಹುದಾಗಿದೆ. ನಮ್ಮ ಜಾನಪದಸಂಸ್ಕೃತಿಯ ಹಿರಿಮೆ ಗರಿಮೆಗಳೇ ಜಾಗತೀಕರಣಕ್ಕೆ ಉತ್ತರವಾಗಬಲ್ಲವು ಎಂಬುದನ್ನು ಮನಗಾಣಬೇಕಾಗಿದೆ.

ಒಟ್ಟಿನಲ್ಲಿ ಗೀಗೀ ಮೇಳಗಳು ತಮ್ಮ ಪ್ರದರ್ಶನಗಳ ಮೂಲಕ ಕಲೆ, ಸಾಹಿತ್ಯ, ಸಂಸ್ಕೃತಿ, ಸಮಾಜ ಮತ್ತು ಹಾಡುಗಾರರ ಸಾಮಾಜಿಕ ಪರಿಸರ ಹೀಗೆ ಒಟ್ಟು ಮಾನವ ಬದುಕಿನ ಗುಣಾತ್ಮಕತೆ ಮತ್ತು ಗುಣಾತ್ಮಕವಲ್ಲದ ಅಂಶಗಳನ್ನು ತೆರೆದು ತೋರುವ ಮೂಲಕ ತನ್ನ ಸೃಜನ ಪ್ರಕ್ರಿಯೆಯನ್ನು ಜೀವಂತವಾಗಿರಿಸಿಕೊಂಡಿದೆ. ಇದಕ್ಕೆ ಬೆಳಗಾವಿ ಜಿಲ್ಲೆಯ ಗೀಗೀ ಮೇಳಗಳು ಸಾಕ್ಷಿಯಾಗಿವೆ.